Petition *re*: Water Rate Levied in North Kanara District

Presentation

Sri V. M. GHADI (Haliyal).—I present a petition signed by the President, Taluk Development Board, Karwar and others regarding water rate leived in North Kanara District.

Petition *re*: Rural electrification in Supa, Karwar and Haliyal

Presentation

Sri V. M. GHADI.—I present a petition signed by the President, Taluk Board, Supa, North Kanara and others regarding Rural Electrification in the taluks of Supa, Karwar and Haliyal in North Kanara District.

Madam SPEAKER.—Both the petitions are presented.

Views abont forming the Malnad and Arecanut Development Board

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅರಣ್ಯ ಮಂತ್ರಿಗಳು ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುವಾಗ ಒಂದು ವಿಷಯವನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು.—ಈಗ ಆ ವಿಷಯ ಮುಗಿದುಹೋಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಡಿನ ಮಂತ್ರಿಗಳು ಏನಾದರು ಹೇಳಿ ಹೊರಟುಹೋಗುತ್ತಾರೆ. ಸಭೆಯಲ್ಲಿ ಇರುವುದಿಲ್ಲ.

ಅಧ್ಯಕ್ಷರು.—ಆ ರೀತಿ ಹಗುರವಾಗಿ ಮಾತನಾಡಬಾರದು. ಅವರು ಕಾಡಿನ ಮಂತ್ರಿಗಳಾದರೆ ತಾವು ಊರಿನ ಸದಸ್ಯರೇನು ? ಆ ರೀತಿ ಮಾತನಾಡಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಹೇಳಿಕೆ ಕೊಡುವಾಗ ;

"In view of the measure taken by Government, it is expected that the areca growers will be relived of the present difficulties and there appears to be no need to form either a Malnad Development Board, Areca Development Board or a Corporation for the purpose". ಎಂದು ಹೇಳಿದ್ದಾರೆ. ಈ ರೀತಿ ಮಲೆನಾಡು ಅಭಿವೃದ್ಧಿ ಮಂಡಲಿಯ ವಿಷಯವನ್ನು ಇದರಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಏನೇನೂ ಇರಲಿಲ್ಲ. ಕೇವಲ ದುರುದ್ದೇಶದಿಂದ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ ಮತ್ತು ಆಪಾದನೆ ಮಾಡಿದ್ದಾರೆ. ಹೇಗಾದರೂ ಮಾಡಿ ಮಲೆನಾಡು ಅಭಿವೃದ್ಧಿ ಮಂಡಲಿಯ ರಚನೆಗೆ ಅಡ್ಡಗಾಲು ಕೊಡುವ ಯೋಚನೆ ಮಾಡುತ್ತಿದ್ದಾರೆಂದು ಕಾಣುತ್ತಿದೆ. ಅದಕ್ಕಾಗಿ ಈ ರೀತಿ ಹೇಳಿಕೆ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಈ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕು ಇಲ್ಲವೇ ಸರ್ಕಾರದವರು ಈ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವಾಗ ತಾವು ಚರ್ಚೆ ಎಂದು ಏನಾದರು ಕೇಳುವುದು ಸರಿಯಲ್ಲ. ಅವರು ಹೇಳಿರುವುದು ದುರುದ್ದೇಶದಿಂದ ಕೂಡಿದೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇದು ಸಮಯವಲ್ಲ. ಮತ್ತು, ಈ ವಿಚಾರದಲ್ಲಿ ಒಂದು ಖಾನಗೀ ನಿರ್ಣಯ ಚರ್ಚೆಯಾಗುತ್ತಿದೆ; ಅದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾರೆ.

Continuation of the term of the Taluk Development Boards

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ತಾಲ್ಲೂಕ್ ಅಭಿವೃದ್ಧಿ ಮಂಡಲಗಳ ಅವಧಿ ಇವೊತ್ತಿಗೆ ಮುಗಿದುಹೋಗುತ್ತದೆ. ಪುನಃ ಟರ್ಮನ್ನು ಎಕ್ಸ್‌ಟೆಂಡ್ ಮಾಡುತ್ತಾರೆಂಬ ವದಂತಿ ಇದೆ. ಮತ್ತು, ತಾಲ್ಲೂಕ್ ಬೋರ್ಡ್‌ಗಳನ್ನು ವಜಾ ಮಾಡಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ತಮ್ಮ ಪಾರ್ಟಿಯಲ್ಲಿ ನಿರ್ಣಯವಾಗಿದೆ ಎಂದು ಬಹಳ ಜನರು ಮಾತನಾಡುತ್ತಿದ್ದಾರೆ. ಆದಕಾರಣ ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾಲ್ಲೂಕು ಬೋರ್ಡ್‌ಗಳಿಗೆ ಚುನಾವಣೆ ನಡೆಸುವ ವಿಚಾರದಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು:

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಭಿವೃದ್ಧಿ ಇರಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಡೆದು ಉತ್ತರ ಕೊಡುವಾಗ ನಾನು ಈ ಘನವನ್ನು ಹೊಂದಿದ ಸಭೆಗೆ ಈ ವಿಷಯದಲ್ಲಿ ತಿಳಿಸಿದ್ದೆ. ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೆ ಚುನಾವಣೆಗೆ ಸಂಬಂಧಪಟ್ಟ ವಿಷಯ ಹಾಗೂ ಅದನ್ನು ಮುಂದುವರೆಸಬೇಕೇ ಅಥವಾ ಬೇಡವೇ, ಅಥವಾ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಬೇಕೇ ಅಥವಾ ಬೇಡವೇ, ಅಥವಾ ಅಡ್ಮಿನಿಸ್ಟ್ರೇಷನ್ ಕಾನ್ಸಿಲನ್ನು ಮಾಡಬೇಕೇ ಅಥವಾ ಬೇಡವೇ ಎಂಬತಕ್ಕಂಥ ಎಲ್ಲ ವಿಷಯಗಳು ಈಗ ಸರ್ಕಾರದ ಮುಂದೆ ಇವೆ, ಅಸೆಂಬ್ಲಿ ಮುಗಿಯುವುದರೊಳಗೆ ಆ ಬಗ್ಗೆ ಒಂದು ತೀರ್ಮಾನವನ್ನು ಹೇಳುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿದ್ದೆ. ಆದರೆ ಅದು ಇನ್ನೂ ಕೂಡ ಸರ್ಕಾರದ ತೀವ್ರವಾದ ಪರಿಶೀಲನೆಯಲ್ಲಿದೆ. ನಾವು ಯಾವ ಒಂದು ತೀರ್ಮಾನವನ್ನೂ ತೆಗೆದು ಕೊಂಡಿಲ್ಲ. ಇವೊತ್ತಿನದಿವಸ ತಾಲ್ಲೂಕ್ ಅಭಿವೃದ್ಧಿ ಮಂಡಲಗಳ ಅವಧಿ ಮುಗಿಯುತ್ತಿರುವುದರಿಂದ, ಅದರ ಅವಧಿಯನ್ನು ಮುಂದುವರೆಸಬೇಕಾಗಿದೆ ಎಂಬ ವಿಷಯವನ್ನು ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಕೆಲವು ಮಾನ್ಯ ಸದಸ್ಯರು.—ಎಷ್ಟು ಕಾಲದವರೆಗೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಬಗ್ಗೆ ಪರ್ಯಾಲೋಚನೆ ಮಾಡುವವರೆಗೆ ಮುಂದಕ್ಕೆ ಹಾಕಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಈ ಬಗ್ಗೆ ಇನ್ನೂ ತೀರ್ಮಾನ ತೆಗೆದು ಕೊಂಡಿಲ್ಲ ಎಂದು ಹೇಳಿದರು. ನಾವು ಇನ್ನೂ 10-15 ದಿವಸ ಕೂರುತ್ತೇವೆ. ಅಷ್ಟರೊಳಗೆ ತಾವು ಉತ್ತರ ಹೇಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪಂಚಾಯತಿ ಆಕ್ಟ್ ಪ್ರಕಾರ ಡಿವಿಜನರ್ ಕಮೀಷನರ್ ಅವರಿಗೆ ಅಧಿಕಾರವಿದೆ. ಅದರ ಪ್ರಕಾರ ಅವಧಿ ಹೆಚ್ಚಿಸುವುದಕ್ಕೆ ಅವರಿಗೆ ನಾವು ಸೂಕ್ತವಾದಂಥ ಆದೇಶ ಕೊಟ್ಟಿದ್ದೇವೆ. ಸರ್ಕಾರದವರು ಮತ್ತೆ ಅಜ್ಞೆ ಮಾಡುವ ತನಕ ಅವಧಿಯನ್ನು ಮುಂದುವರೆಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರತಿಯೊಂದು ಬೋರ್ಡಿನವರು ಇಂದಿಗೆ ತಮ್ಮ ಅವಧಿ ಮುಗಿಯುತ್ತದೆಂದುಕೊಂಡು ಎರಡು ಸಾವಿರ ರೂಪಾಯಿಗಳವರೆಗೆ ಬೋರ್ಡಿನ ಹಣವನ್ನು ಡಿನ್ನರ್ ಮತ್ತು ಹೋಜೋ ತೆಗೆಸಿಕೊಳ್ಳುವುದಕ್ಕೆ ಖರ್ಚು ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ನಿರ್ದಿಷ್ಟವಾದ ಡೈರಕ್ಷನನ್ನು ದೇಶದಾದ್ಯಂತವಿರುವ ಎಲ್ಲ ತಾಲ್ಲೂಕ್ ಬೋರ್ಡ್‌ನವರಿಗೂ ಕೊಡದೇ ಹೋದರೆ ಇದೇ ರೀತಿ ಹಣವನ್ನು ಪೋಲು ಮಾಡುತ್ತಾರೆ. ಆದಕಾರಣ ಇಂತಹ ತಾರೀಖಿನೊಳಗೆ ಚುನಾವಣೆ ನಡೆಸುತ್ತೇವೆಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಒಳ್ಳೆಯದು.

ಶ್ರೀ ಕೆ. ಎನ್. ವೀರಪ್ಪಗೌಡ.—ಅದು ಬೋರ್ಡಿನ ಹಣವಲ್ಲ, ಸ್ವಂತ ಹಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರ್ಕಾರದ ನಿಲುವು ಈ ಬಗ್ಗೆ ಖಚಿತವಾಗಿಲ್ಲದಿರುವುದರಿಂದ ಅಧ್ಯಕ್ಷರುಗಳಿಗೆ ಸಭೆಗಳನ್ನು ಕರೆಯುವ ಉತ್ಸಾಹವೇ ಇಲ್ಲ. ಸಭೆ ಕರೆದರೂ ಸಹ ಸದಸ್ಯರು ಸಭೆಗೆ ಹಾಜರಾಗುತ್ತಿಲ್ಲ. ಕಾರಣ ತಾವು ಇಂದು ಹೋಗುತ್ತೇವೋ ಅಥವಾ ನಾಳೆ ಹೋಗುತ್ತೇವೋ ಎಂಬ ಅನುಮಾನ ರಾಜ್ಯದಾದ್ಯಂತವಿರುವ ಎಲ್ಲ ಸದಸ್ಯರಿಗೂ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಪ್ರಜಾ ಪ್ರಭುತ್ವದ ನೀತಿಯ ಬಗ್ಗೆ ಮಾನ್ಯ ಮಂತ್ರಿಗಳು ಇಷ್ಟೊಂದು ಲಘುವಾಗಿ ಉತ್ತರ ಕೊಡುವುದು ಸರಿಯಲ್ಲ. ಮುಖ್ಯವಾಗಿ ಚುನಾವಣೆ ನಡೆಸುತ್ತೀರಾ ಅಥವಾ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತೀರಾ ಎಂಬ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಘನವನ್ನು ಹೊಂದಿದ ಸಭೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಘನವಾದ ಹೇಳಿಕೆಯನ್ನು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಯಾರೇ ಆಗಲಿ ಚುನಾವಣೆಗಳನ್ನು ನಡೆಸಬೇಕೆಂಬುದೇ ಅವರ ಅಭಿಪ್ರಾಯವಾಗಿರುವುದರಿಂದ, ಚುನಾವಣೆಗಳನ್ನು ಯಾವ ಕಾರಣದಿಂದ ಮುಂದಕ್ಕೆ ಹಾಕಿದ್ದೇವೆಂಬುದು ಸಹ ಮಾನ್ಯ ಸದಸ್ಯರಿಗೆ ತಿಳಿದಿದೆ. ಚುನಾವಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದನ್ನು ತಿಳಿಸಿದ್ದೇನೆ. ಈ ಅಸೆಂಬ್ಲಿ ಅಧಿವೇಶನ ಮುಗಿಯುವುದರೊಳಗೆ ಸರ್ಕಾರದ ಅಭಿಪ್ರಾಯವನ್ನು ಹೇಳುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ನಾನು ಈ ಸಭೆಗೆ ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತೇನೆ.

12-30 P.M.

Banning the Bangalore University Syndicate to Change the Posts in the University

ಶ್ರೀ ಕೆ. ಆರ್. ಶ್ರೀನಿವಾಸಾಲುನಾಯ್ಡು.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಯೂನಿವರ್ಸಿಟಿಗೆ ಸಂಬಂಧಪಟ್ಟ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯ ಸಿಂಡಿಕೇಟ್‌ನವರು ಕೆಲವು ಉನ್ನತ ಹುದ್ದೆಗಳನ್ನು ಬದಲಾವಣೆ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಆ ಬಿಲ್ಲು ಈ ಸಭೆಯಲ್ಲಿ ಡಿಸ್‌ಕಷನ್ ಸ್ಟೇಜಿನಲ್ಲಿರುವುದರಿಂದ ಅದು ಮುಕ್ತಾಯವಾಗುವವರೆಗೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಯಾವ ಹುದ್ದೆಗಳನ್ನೂ ಬದಲಾವಣೆ ಮಾಡಬಾರದು ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Reply to a Call Attention Notice

ಶ್ರೀ ಟಿ. ಎಂ. ಮಂಜುನಾಥ್.—ಈಗ್ಗೆ ಸ್ವಲ್ಪದಿವಸಗಳ ಹಿಂದೆ ತಿಪ್ಪಟೂರಿನಲ್ಲಿ ಪೋಲೀಸಿನವರು ಮಾಡಿರತಕ್ಕ ಕೃತ್ಯಗಳ ಬಗ್ಗೆ ಮತ್ತು ನೇಕಾರರ ಬಗ್ಗೆ ಹಾಗೂ ಸೀಮೆ ಎಣ್ಣೆಯ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅವು ಏನಾದವು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

Beating Sri Gopi near the Bangalore City Railway Station

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ನ್ಯಾಯಾಧೀಶರಾದ ಶ್ರೀಮಾನ್ ಹೆಗ್ಗಡೆಯವರು ಬಂದಾಗ ಅವರಿಗೆ ಪರವಾಗಿ ಸ್ವಾಗತ ಮತ್ತು ವಿರೋಧವಾಗಿ ಕೆಲವು ಪ್ರದರ್ಶನಗಳು ರೈಲ್ವೆ ಸ್ಟೇಷನ್‌ನಲ್ಲಿ ನಡೆದವು. ಆಗ ಪೋಲೀಸಿನವರು ಜನಗಳನ್ನು ಹೊಡೆದರು. ಆ ಸಂದರ್ಭದಲ್ಲಿ ನಮ್ಮ ಸ್ನೇಹಿತರಾಂದಂತಹ ಗೋಪಿ ಎನ್ನುವವರನ್ನೂ ಪೋಲೀಸಿನವರು ಹೊಡೆದಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪುಂಡಾಟಿಕೆಯನ್ನು ಮಾಡಿದವರನ್ನು ಹೊಡೆಯಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಪ್ರದರ್ಶನ ನಡೆಸುವುದಕ್ಕೆ ಹೋಗಿದ್ದರೆ ಅವರನ್ನು ಪೋಲೀಸಿನವರು ಸಿಕ್ಕಾಪಟ್ಟೆ ಹೊಡೆದಿದ್ದಾರೆ.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಸದಸ್ಯರು ನನಗೆ ನೋಟೀಸ್ ಕಳುಹಿಸಿಲ್ಲ. ಈ ರೀತಿ ಇದ್ದಕ್ಕಿದ್ದಹಾಗೆಯೇ ಎದ್ದು ನಿಂತು ಮಾತನಾಡಿದರೆ ನನಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆ ಬಗ್ಗೆ ನೋಟೀಸು ಕಳುಹಿಸಿ ನಂತರ ಹೇಳಿ.

Search of one Prakash in Bangalore by his Parents

ಶ್ರೀ ಕಾಗೋಡು ತಿಮ್ಮಪ್ಪ.—ನಾನು ರೂಲ್ ನಂಬರ್ 312ರ ಪ್ರಕಾರ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೆ. ಆ ವಿಚಾರ ಇಷ್ಟೆ. ಬೆಂಗಳೂರಿನಲ್ಲಿ ಪ್ರಕಾಶ ಎನ್ನುವ ಹುಡುಗನನ್ನು ಯಾರೋ ಅಪಹರಣ ಮಾಡಿದ್ದಾರೆ. ಆ ಹುಡುಗನ ತಂದೆತಾಯಿಗಳು ಅವನನ್ನು ಹುಡುಕಿಕೊಂಡು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಪೋಲೀಸಿನವರು ಆ ಹುಡುಗನನ್ನು ಹುಡುಕಿಲ್ಲ. 8 ದಿವಸಗಳಿಂದ ಒಬ್ಬ ಹುಡುಗನನ್ನು ಪೋಲೀಸಿನವರು ಹುಡುಕಲಿಲ್ಲ ಎಂದರೆ ಸರ್ಕಾರ ಇದೆಯೇ?

ಅಧ್ಯಕ್ಷರು.—ತಮ್ಮ ನೋಟೀಸನ್ನು ಕಾಲ್‌ಅಟೆನ್‌ಷನ್ ನೋಟೀಸಾಗಿ ಗಣನೆಮಾಡಿ ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ. ಉತ್ತರ ಬಂದ ಕೂಡಲೇ ಅದನ್ನು ಅಜೆಂಡಾವಲ್ಲಿ ಸೇರಿಸುತ್ತೇನೆ.

Mysore Land Reforms (Amendment) Bill, 1973, as reported by the J.S.C.

Motion to consider.

(Debate contd.)

†Sri B. B. SAYANAK (Belgaum).—Madam Speaker, according to Section 112 some powers have been given to the Tribunal according to Section 112 some powers have been given to the Tribunal-whether he is a tenant or not must be decieded by the Tribunal. But according to Section 4 of the Joint Select ommittee's recommendation they have retained the word 'Court' as it is. According to the Mysore Land Reforms Act, the Court has a power to deal with the tenants. The word 'Court' is there and there would be complications, and delay. Therefore, I request the Government that this is a grave mistake and it must be rectified and you must use the word 'Tribunal'